ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ

# ಕಸ್ತೂರಬಾ ಗಾಂಧಿ ಬಾಲಿಕ ವಿದ್ಯಾನಿಲಯ (ಕೆಜಿಬಿವಿ)

**ಯೋಜನೆಯ ಉದ್ದೇಶಗಳು:**

ಪ್ರಾಥಮಿಕ ಶಾಲೆಗಳಲ್ಲಿ (ವಿಶೇಷವಾಗಿ ಹಿರಿಯ ಪ್ರಾಥಮಿಕ ಹಂತದಲ್ಲಿ) ಬಾಲಕಿಯರ ಹಾಗೂ ಬಾಲಕರ ದಾಖಲಾತಿ ದರಗಳಲ್ಲಿ ಇನ್ನೂ ಗಮನಾರ್ಹವಾದ ಅಂತರವಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಸೌಲಭ್ಯ ವಂಚಿತ ಸಮುದಾಯಗಳಲ್ಲಿ ಲಿಂಗ ತಾರತಮ್ಯವನ್ನು ಗಮನಿಸಬಹುದಾಗಿದೆ. ಸಮುದಾಯದಲ್ಲಿ ಅವಕಾಶ ವಂಚಿತ ಗುಂಪುಗಳ ಬಾಲಕಿಯರಿಗಾಗಿ ಶಾಲೆಯ ಅವಕಾಶ (Access) ಮತ್ತು ಗುಣಾತ್ಮಕ ಶಿಕ್ಷಣದ ಸೌಲಭ್ಯಗಳನ್ನು (Quality Education) ಖಾತ್ರಿಪಡಿಸಲು ವಸತಿ ಸಹಿತ ಸನಿವಾಸ ಶಾಲೆಗಳನ್ನು ಪ್ರಾರಂಭಿಸುವುದು ಕಸ್ತೂರ ಬಾ ಗಾಂಧಿ ಬಾಲಿಕಾ ವಿದ್ಯಾಲಯ ಯೋಜನೆಯ ಮುಖ್ಯ ಉದ್ದೇಶವಾಗಿದೆ.

## 1. ಕೆಜಿಬಿವಿ ಶಾಲೆಗಳಿಗೆ ಅರ್ಹ ಬಾಲಕಿಯರ ದಾಖಲಾತಿಗೆ ನಿಯಮಗಳು

a) ಪ್ರಾಥಮಿಕ ಹಂತದಲ್ಲಿ 10+ ರಿಂದ 14 ವಯಸ್ಸಿನ ಶಾಲೆಯಿಂದ ಹೊರಗುಳಿದ ಬಾಲಕಿಯರಿಗೆ ಆದ್ಯತೆ ನೀಡುವುದು.
b) ಕ್ಲಿಷ್ಟಕರವಾದ ವಲಯಗಳಲ್ಲಿ (Difficult area) (ವಲಸೆ ಮಕ್ಕಳು, ಶಾಲೆಗೆ ಅರ್ಹತೆ ಇರದ ಚದುರಿ ಹೋದ ಜನವಸತಿಗಳಲ್ಲಿನ) ಕಿರಿಯ ವಯಸ್ಸಿನ ಮಕ್ಕಳಿಗೂ ಆದ್ಯತೆ ನೀಡುವುದು.
c) ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿನ ಹೆಣ್ಣುಮಕ್ಕಳಿಗೆ ಆದ್ಯತೆ ನೀಡುವುದು.
d) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಹೆಣ್ಣುಮಕ್ಕಳಿಗೆ ಶೇ.75ರಷ್ಟು ಮತ್ತು ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವವರಿಗೆ ಶೇ.25ರಷ್ಟು ಮೀಸಲಾತಿ ನೀಡುವುದು.
e) ಅಂಗವಿಕಲತೆಯಿಂದಾಗಿ ಶಾಲೆಯಿಂದ ಹೊರಗೆ ಉಳಿದಿರುವ ಹೆಣ್ಣುಮಕ್ಕಳಿಗೂ ಈ ಶಾಲೆಗಳಲ್ಲಿ ಆದ್ಯತೆ ನೀಡುವುದು.
f) ಶಾಲೆಗೆ ಸೇರಿಲ್ಲದ ಹಾಗೂ ಒಂದು ವರ್ಷಕ್ಕೂ ಹೆಚ್ಚು ಕಾಲ ಶಾಲೆ ಬಿಟ್ಟ ಬಾಲಕಿಯರಿಗೆ ಪ್ರಾದಾನ್ಯತೆ ನೀಡಿ ನಂತರ ಇತರೆ ಬಾಲಕಿಯರನ್ನು ದಾಖಲು ಮಾಡುವುದು.

## 2. ದಾಖಲಾತಿಯ ಕಾರ್ಯತಂತ್ರಗಳು:

a) ಬೇಸಿಗೆಯಲ್ಲಿ ನಡೆಸಲಾಗುವ ಚಿಣ್ಣರ ಅಂಗಳ ಹಾಗೂ ಕಳೆದ ಸಾಲಿನಲ್ಲಿ ನಡೆದ ದೀರ್ಘಾವಧಿ ಸನಿವಾಸ ಸೇತು ಬಂಧ ಶಿಕ್ಷಣದ ಬಾಲಕಿಯರಿಗೆ ಆದ್ಯತೆ.
b) ಮಕ್ಕಳ ಸಮೀಕ್ಷೆಯಲ್ಲಿನ ಪಟ್ಟಿಯನ್ನು ಅನುಸರಿಸಿ ಅರ್ಹ ಬಾಲಕಿಯರನ್ನು ಗುರುತಿಸುವುದು.
c) ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಹಾಗೂ ತಾಲ್ಲೂಕಿನ ಎಲ್ಲಾ ಶಾಲೆಗಳ ಶಿಕ್ಷಕರು ಅರ್ಹ ಬಾಲಕಿಯರನ್ನು ಗುರುತಿಸಿ ಕೆಜಿಬಿವಿ ಶಾಲೆಗೆ ದಾಖಲಾಗುವಂತೆ ಪ್ರೇರೇಪಿಸುವುದು.
d) ಸಂಘ ಸಂಸ್ಥೆಗಳು, ಮಹಿಳಾ ಸಂಘಗಳು ಹಾಗೂ ಸಮುದಾಯದ ಸಹಕಾರದೊಂದಿಗೆ ಬಾಲಕಿಯರನ್ನು ಗುರುತಿಸುವುದು.
e) ಗ್ರಾಮ ಸಭೆಗಳಲ್ಲಿ ಬಾಲಕಿಯರನ್ನು ದಾಖಲಿಸುವ ಬಗ್ಗೆ ಚರ್ಚಿಸುವುದು ಹಾಗೂ ಗ್ರಾಮಗಳಲ್ಲಿ ಶಿಕ್ಷಕರ ಹಾಗೂ ಸಮುದಾಯದ ಸಹಕಾರದೊಂದಿಗೆ ದಾಖಲಾತಿ ಆಂದೋಲನಗಳನ್ನು ಏರ್ಪಡಿಸುವುದು.